ಆರಂಭಕ್ಕೆ ಬರೆದೀನಿ, ‘ಈ ಆತ್ಮಕತೆ ಒಂದು ಕಲಾಕೃತಿ ಎಂದು ನಾನು ಭ್ರಮಿಸುವುದಿಲ್ಲ. ಉತ್ತಮ ಕಲಾಕೃತಿಯಾಗಬೇಕೆಂಬ ಉದ್ದೇಶವೂ ನನಗಿಲ್ಲ. ನಾನು ಮತ್ತು ನನ್ನ ಜನಾಂಗದ ಅನೇಕರು ಬದುಕಿದ ಕಥೆ ಹೇಳುವುದೇ ನನ್ನ ಆಸೆಯಾಗಿದೆ’ ಅಂತ.

ನಾನು ‘ಸ್ಥಾಪಿತ’ ಲೇಖಕ ಅಲ್ಲ. ಆಗೀಗ ನನ್ನ ಸಂತೋಷಕ್ಕೋ, ಸಂದರ್ಭದ ಅನಿವಾರ್ಯತೆಗೋ ಬರೆದವನು. ಆದ್ರೆ ನನ್ನ ಬದುಕಿನ ನೂರಾರು ಹಿಂಸೆಯ ಅನುಭವಗಳೇನಿದಾವಲ್ಲ – ಅವು ತಾವೇ ದಾರಿ ಮಾಡ್ಕೋತಾ ನನಗೂ ದಾರಿ ತೋರಿಸಿದ್ವು ಅನ್ನಸ್ತದ. ಇನ್ನೊಂದು ಮಾತು ಹೇಳಲೇಬೇಕು, ನಾನು ಬರೆಯೋದು ಒಂದು ಭಾಗ ಆತು. ಆದ್ರೆ ಇದನ್ನ ಹಸ್ತಪ್ರತಿ ನೋಡಿದ ಕೂಡಲೆ ಅಚ್ಚು ಹಾಕಿಸಿ ಸಹೃದಯರಿಗೆ ತಲುಪ್ಸೋ ಹಂಗೆ ಮಾಡಿದವರು ಲೋಹಿಯಾ ಪ್ರಕಾಶನದ ಮಾನ್ಯ ಚನ್ನಬಸವಣ್ಣನವರು. ಖರೇನೆ ಅವರು ‘ಅಣ್ಣ’ ಅದಾರ. ಅವರಿಗೆ ಬರೇ ಕೃತಜ್ಞತೆ ಹೇಳಿದ್ರೆ ಅದು ಬಹಳ ಚಿಕ್ಕ ಮಾತಾಗ್ತದ...



2012ರಲ್ಲಿ ಈ ಪುಸ್ತಕ ಪ್ರಕಟ ಆದ ಮ್ಯಾಲ ನಡದ ಒಂದು ಘಟನೆ ಹೇಳ್ಬೇಕು. ಶಿವಣಗಿಯ ಒಬ್ಬ ಪ್ರಮುಖ ವ್ಯಕ್ತಿಗೆ ನನ್ನ ಚಿಕ್ಕಪ್ಪ, ಸಂಬಂಧಿಕರು ಆಗ ಪತ್ರಿಕೆನಾಗ ಪ್ರಕಟ ಆಗಿದ್ದ ‘ಗೊಂದಲಿಗ್ಯಾ’ ಪುಸ್ತಕದ ಒಂದು ಅಧ್ಯಾಯವನ್ನು ತೋರಿಸಿ ‘ಇವರು ನಮ್ಮ ಅಣ್ಣ ಆಗ್ಬೇಕು, ನಮ್ಮ ಸಮಾಜದವರು. ನಾವು ಮಾಡೋ ನ್ಯಾಯಪಂಚಾಯ್ತಿನಾಗೆ ನಡೆಯೋ ಅನ್ಯಾಯದ ಬಗ್ಗೆ ಬರ್ದಾನ’ ಅಂತ ಹೇಳಿದ್ದಾರೆ. ಆ ಸಾಹುಕಾರರು ಒಂದು ದಿನ ನನಗೆ ಫೋನು ಮಾಡಿ, ‘ನೀನು ಶಿವಣಿಗಿಯವನಂತೆ, ನಿಮ್ಮ ಜಾತಿ ಬಗ್ಗೆ ಹೀಗೆಲ್ಲ ಬರೆದಿದ್ದೀಯಂತೆ...’ ಎಂದು ರೋಪು ಹಾಕಿದ. ಅದಕ್ಕೆ ನಾನಂದೆ, ‘ನೋಡ್ರಿ, ಅದು ನಾನು ಅನುಭವಿಸಿದ ಕಥೆ, ಜೊತೆಗೆ ಸಹಜವಾಗಿ ನಮ್ಮ ಸಮುದಾಯದ ಸಂಪ್ರದಾಯಗಳು, ರೀತಿನೀತಿಗಳೂ ಬಂದಾವ’ ಅಂದೆ. ಅವನು ಜೋರು ದನಿನಾಗ, ‘ಏಯ್ ನೀನು ಅನುಭವಿಸಿದ್ದಾದ್ರ ನಿಂದ, ನಿಮ್ಮಪ್ಪಂದ, ನಿಮ್ಮ ತಾತಂದಷ್ಟೆ ಬರೀಬೇಕು, ನಿಮ್ಮ ಸಮಾಜದ ಬಗ್ಗೆ ಯಾಕೆ ಬರ್ದಿ, ನಿಮ್ಮ ಜನದ ಬಗ್ಗೆ ನಿಂಗೆ ಸ್ವಲ್ಪಾದ್ರು ಕಾಳಜಿ ಐತಾ ನಿಂಗೆ... ಆ ಪುಸ್ತಕಗಳನ್ನೆಲ್ಲ ಇಲ್ಲಿಗೆ ತಂದು ಸುಟ್ಟು ಹಾಕು...’ ಇನ್ನೂ ಏನೇನೋ ಹೇಳಿ ಜಬರಿಸಾಕ ಹತ್ತಿದ. ನನಗೆ ಸಿಟ್ಟು ಬಂದು, ‘ನೋಡ್ರಿ ಸಾವ್ಕಾರ್ರೆ, ಇವತ್ತು ನಮ್ಮಪ್ಪನ ಕಾಲದ ದಿನಗಳಿಲ್ಲ, ನಿಮಗೆ ದಮ್ ಇದ್ರೆ ಇಲ್ಲೇ ಬನ್ರಿ, ನನ್ನ ಪುಸ್ತಕಗಳ್ನ ನಿಮ್ಮ ಮುಂದಿಡ್ತೀನಿ, ಅದ್ಹೆಂಗೆ ಸುಡ್ತೀರೋ ನೋಡ್ತೀನಿ’ ಅಂದೆ. ಅವರು ಅಷ್ಟಕ್ಕೆ ಸುಮ್ಮನಾದರು. ನಮ್ಮ ವಿಚಾರಗಳಲ್ಲಿ ಸ್ಪಷ್ಟತೆ ಇಲ್ಲದೆ ಹೋದರೆ, ಅವಕ್ಕ ನಾವು ಗಟ್ಟಿಯಾಗಿ ಬದುಕದೆ ಹೋದ್ರೆ ಆತ್ಮಗೌರವ ಕಳಕೊಂಡು ಬದುಕಬೇಕಾಗ್ತದ ನೋಡ್ರಿ. ನಮ್ಮದೇ ಸಮುದಾಯದ ಕೆಲಮಂದಿ ಆತ್ಮಕತೆಯ ಶೀರ್ಷಿಕೆ ‘ಗೊಂದಲಿಗ್ಯಾ’ ಅನ್ನೋದನ್ನ ವಿರೋಧ ಮಾಡಿದ್ರು...

### ◆ ಯಾಕೆ?

ಹಿಂದೆ ನಮ್ಮ ಸಮುದಾಯವನ್ನು ಎಸ್‌.ಟಿ ವರ್ಗಕ್ಕೆ ಸೇರಿಸಬೇಕು ಅಂತ ಪ್ರಸ್ತಾಪ ಬಂದಾಗ ಜಾತಿ ಶ್ರೇಷ್ಠತೆ ಇಟ್ಟುಕೊಂಡ ನಮ್ಮ ಕಮ್ಯುನಿಟಿಯ ಕೆಲವರು ‘ನಾವು ಕ್ಷತ್ರಿಯರಿದ್ದೀವಿ, ಆ ವರ್ಗಕ್ಕೆ ಸೇರಿಸಬ್ಯಾಡಿ’ ಅಂತ ವಿರೋಧ ಮಾಡಿದ್ರು. ಹಾಗಾಗಿ ಇವತ್ತು ಕೂಡ ಗೊಂದಲಿಗ ಸಮುದಾಯ ಪ್ರವರ್ಗ– 1ರಲ್ಲೇ ಇದೆ. ಹಿಂಗೆ ಪೊಳ್ಳಾಗಿ ಒಣಜಂಭ ಮಾಡುವವರು ಎಲ್ಲ ಜಾತಿಗಳಲ್ಲಿ ಇರೋ ಹಂಗ ನಮ್ಮಲ್ಲೂ ಇದ್ದಾರ. ಅದೇ ಥರ, ಅಲ್ಪಸ್ವಲ್ಪ ವಿದ್ಯಾವಂತರಾಗಿರೋ ಕೆಲವರು ‘ಗೊಂದಲಿ ಅಥವಾ ಗೊಂದಲಿಗ ಅನ್ನಬಹುದಿತ್ತು, ‘ಗೊಂದಲಿಗ್ಯಾ’ ಅನ್ನೋದು ಎಷ್ಟು ಅಸಹ್ಯ ಐತಿ’ ಅಂದ್ರು. ‘ಗೊಂದಲಿಗ್ಯಾ’ ಅನ್ನೋದು ಕೆಳಜಾತಿಯವ್ರನ್ನ ಮೇಲ್ಜಾತಿಯವ್ರು ಕೂಗುವಾಗ ಬಳಸುತ್ತಿದ್ದ ಬಹಳ ತುಚ್ಛ ಧ್ವನಿಯ ಪದ. ನನ್ನ ಪುಸ್ತಕಕ್ಕೆ ಆ ಹೆಸರಿಡೋದಕ್ಕೆ ಕೂಡ ನನ್ನ ಮನಸ್ಸಿನ್ಯಾಗ ಗಟ್ಟಿಯಾಗಿ ಕೂತಿದ್ದ ಅವಮಾನವೇ ಕಾರಣ. ಆ ಹೆಸರಿಡಬಾರದಿತ್ತು ಅಂತ ಅಂದವರಿಗೆ ನಾನು ‘ನೀವು ಪುಸ್ತಕ ಓದ್ರಪ ಯಾಕೆ ಹಂಗೆ ಹೆಸರಿಟ್ಟನಿ ಅಂತ ತಿಳಿತದ’ ಅಂದೆ. ಅವರು, ‘ಅಂತ ಹೆಸರಿಟ್ಟ ಪುಸ್ತಕಾನ ಯಾಕ ಓದಬೇಕು ಬಿಡ್ರಿ’